## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**-180/2023 **DW**-2

**ದಿಃ 10.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಜೆ ಪಿ ಡಿ ವಕೀಲರಿಂದಃ**

**1.** ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಯಾವದೇ ರೀತಿಯ ವ್ಯವಹಾರ ಮಾಡುವದಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಮ್ಮ ಉದ್ಯೋಗವನ್ನು ವ್ಯವಹಾರ ಎಂದು ಬರೆಯಲಾಗಿದೆ ಎಂದರೆ ಸರಿ. ವಾದಿಯು ನನ್ನ ಸ್ವಂತ ಅಣ್ಣನಾಗಿರುತ್ತಾನೆ. ನನ್ನ ತಂದೆಗೆ ಇಬ್ಬರು ಮಕ್ಕಳು. ಯಾವದೇ ಹೆಣ್ಣು ಮಕ್ಕಳು ಇರುವದಿಲ್ಲ. ದಾವಾ ಆಸ್ತಿ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಆಸ್ತಿ ನಂಬರಃ2671/1 ಆಗಿರುತ್ತದೆ. ಅದರ ವಿಸ್ತೀರ್ಣ 50.1/9 ಚ ಯಾರ್ಡ ಆಗಿರುತ್ತದೆ. ಅದರಲ್ಲಿ ರಹವಾಸಿ ಮತ್ತು ವಾಣಿಜ್ಯ ಕಟ್ಟಡ ಕಟ್ಟಿರುತ್ತೀರಿ ಎಂದರೆ ಸರಿ. ಅದನ್ನು 1990 ರಲ್ಲಿ ಕಟ್ಟಲಾಗಿರುತ್ತದೆ. ಸದರಿ ಕಟ್ಟಡದ 2 ನೇ ಅಂತಸ್ತಿನಲ್ಲಿ ನಾನು ನನ್ನ ತಂದೆ ಮತ್ತು ನನ್ನ ಮಕ್ಕಳು ಇಲ್ಲಿಯವರೆಗೂ ವಾಸವಾಗಿರುತ್ತೇವೆ. ಸಿಟಿಎಸ್ ನಂಬರಃ2671/1 ರಲ್ಲಿ ತಾವು ತಮ್ಮ ಅಣ್ಣ ಸ್ವಾದೀನದಲ್ಲಿರುತ್ತೀರಿ ಎಂದರೆ ಸರಿ.

2. ಕಟ್ಟಡವನ್ನು ಸಿಟಿಎಸ್ ನಂಬರಃ2671/1, 2671/ಬಿ , 2672/1 ರಲ್ಲಿ ಕಟ್ಟಲಾಗಿರುತ್ತದೆ ಎಂದರೆ ಸರಿ. ತಮ್ಮ ಅಜ್ಜನವರ ಹೆಸರಿನಲ್ಲಿ ಸಿಟಿಎಸ್ ನಂಬರಃ2670 ಹಾಗೂ 2671 ಇತ್ತು ಎಂದರೆ ಸಾಕ್ಷಿಯು 2670 ಮಾತ್ರ ರಾಚಪ್ಪನ ಹೆಸರಿನಲ್ಲಿತ್ತು ಎನ್ನುತ್ತಾರೆ. ಸಿಟಿಎಸ್ ನಂಬರಃ2671 ಸಹ ರಾಚಪ್ಪನಿಂದ ಶಿವಪ್ಪನಿಗೆ ಬಂದಿರುತ್ತದೆಂದರೆ ಸರಿ. ತಮ್ಮ ಅಜ್ಜ ಶಿವಪ್ಪನವರು ಸಿಟಿಎಸ್ ನಂಬರಃ2672 ರಲ್ಲಿ 34 ಚ ಯಾರ್ಡನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಶಿವಪ್ಪನವರು ಸಿಟಿಎಸ್ ನಂಬರಃ2670 ಹಾಗೂ 2671 ವನ್ನು ಅವರ ಇಬ್ಬರ ಮಕ್ಕಳಾದ ವೀರಣ್ಣ ಮತ್ತು ಚನ್ನಮಲ್ಲಪ್ಪರವರಿಗೆ ಭಾಗ ಮಾಡಿಕೊಟ್ಟಿರುತ್ತಾರೆಂದರೆ ಸರಿ. ಶಿವಪ್ಪನವರು ಖರೀದಿ ಮಾಡಿದ ಸಿಟಿಎಸ್ ನಂಬರಃ2672 ನ್ನು ಅವರ ಮೊಮ್ಮಕ್ಕಳಾದ ಅರುಣ ಮತ್ತು ವಿಶ್ವನಾಥ ರವರಿಗೆ ತಲಾ ಅರ್ದ ಹಿಸ್ಸೇಯಂತೆ ದಾನ ಮಾಡಿರುತ್ತಾರೆಂದರೆ ಸರಿ. ನಂತರ ವಿಶ್ವನಾಥ ತನ್ನ ಅರ್ದ ಹಿಸ್ಸೇಯನ್ನು ಅರುಣ ರವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿ.

ಸಿಟಿಎಸ್ ನಂಬರಃ2672/ಬಿ ಸಂಪೂರ್ಣ ಆಸ್ತಿಯು ಅರುಣ ರವರ ಹೆಸರಿನಲ್ಲಿ ಹಾಗೂ ಸ್ವಾದೀನದಲ್ಲಿರುತ್ತದೆಂದರೆ ಸರಿ.

3. ಕಟ್ಟಡದಲ್ಲಿ ನಾಲ್ಕು ಅಂಗಡಿ ಇದ್ದು ಅದರ ಬಾಡಿಗೆಯನ್ನು ತಾವು ತೆಗೆದುಕೊಳ್ಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಿಟಿಎಸ್ ನಂಬರಃ2672/ಬಿ ಯಲ್ಲಿ ಎರಡು ಅಂಗಡಿಯನ್ನು ಕಟ್ಟಲಾಗಿದೆ ಎಂದರೆ ಸಾಕ್ಷಿಯು ಸಿಟಿಎಸ್ ನಂಬರಃ2671/1 ರ ಸ್ವಲ್ಪ ಭಾಗವನ್ನು ಸೇರಿಸಿ ಕಟ್ಟಲಾಗಿದೆ ಎನ್ನುತ್ತಾರೆ. ಈ ಎರಡೂ ಅಂಗಡಿಗಳ ಬಾಡಿಗೆಯನ್ನು ಅರುಣ ರವರು ಪಡೆಯುತ್ತಿದ್ದಾರೆಂದರೆ ಸರಿ.

4. ಬೈಲಹೊಂಗಲ ಬ್ಯಾಂಕನಲ್ಲಿ ತಮ್ಮ ತಂದೆ ಹೆಸರಿನಲ್ಲಿ 8 ಲಕ್ಷ ರೂ ಗಳ ಸಾಲ ಇತ್ತು ಎಂರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಅಣ್ಣನ ಸಲುವಾಗಿ ಮಾಡಲಾಗಿತ್ತು ಎನ್ನುತ್ತಾರೆ. ತಾವು ತಮ್ಮ ಅಣ್ಣನ ಸಲುವಾಗಿ ಸಾಲ ಮಾಡಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕರ್ನಾಟಕ ಬ್ಯಾಂಕನಲ್ಲಿ ತಮ್ಮ ಅಣ್ಣನ ಹೆಸರಿನಲ್ಲಿ ಒ ಡಿ ಸಾಲ ಇತ್ತು ಎಂದರೆ ಸರಿ. ಬೈಲಹೊಂಗಲ ಬ್ಯಾಂಕನ ಸಾಲವನ್ನು ತಾವು ಸರಿಯಾಗಿ ತುಂಬಲಿಲ್ಲ ಎಂದರೆ ಸರಿಯಲ್ಲ. ಸದರಿ ಸಾಲವು ಮುಂದೆ ಏನಾಯಿತು ಎಂದರೆ ಸಾಕ್ಷಿಯು ಸದರಿ ಬೈಲಹೊಂಗಲ ಬ್ಯಾಂಕನಿಂದ ನನ್ನ ಅಣ್ಣನ ಕರ್ನಾಟಕ ಬ್ಯಾಂಕನಿಂದ ಒ ಡಿ ಸಾಲಕ್ಕೆ ವಿಲೀನವಾಯಿತು ಎನ್ನುತ್ತಾರೆ. ತಮ್ಮ ತಂದೆಯವರು ಸರಿಯಾಗಿ ಸಾಲ ತುಂಬದ ಕಾರಣ ತಮಂ ಅಣ್ಣನ ಸಾಲಕ್ಕೇ ಟೇಕಒವರ ಆಯಿತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮ್ಮ ತಂದೆಯವರು ಜಾಮೀನು ಮಾತ್ರ ಆಗಿದ್ದರು ಎಂದು ನುಡಿಯುತ್ತಾರೆ. ಬೈಲಹೊಂಗಲ ಬ್ಯಾಂಕನ ಸಾಲಕ್ಕೆ ಸಿಟಿಎಸ್ ನಂಬರಃ2671/1 ನ್ನು ಅಡಮಾನ ಮಾಡಲಾಗಿತ್ತು ಎಂದರೆ ಸರಿ. ಸದರಿ ಆಸ್ತಿಯು ನಂತರ ಕರ್ನಾಟಕ ಬ್ಯಾಂಕಗೆ ಅಡಮಾನವಾಯಿತು ಎಂದರೆ ಸರಿ. ದಾವಾ ಆಸ್ತಿಯ ಚಕಬಂದಿಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎಂದು ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಸಿಟಿಎಸ್ ನಂಬರಃ2669, ಉತ್ತರಕ್ಕೆ ಸಿಟಿಎಸ್ ನಂಬರಃ2672 ಹಾಗೂ ದಕ್ಷಿಣಕ್ಕೆ ರಸ್ತೆ ಎಂದು ನುಡಿಯುತ್ತಾರೆ.

5. ಸಿಟಿಎಸ್ ನಂಬರಃ2671 ತಮ್ಮ ತಂದೆ ಮತ್ತು ದೊಡ್ಡಪ್ಪನ ನಡುವೆ ವಿಭಾಗವಾಗಿ ಸಿಟಿಎಸ್ ನಂಬರಃ2671/1 ತಮ್ಮ ತಂದೆ ಹೆಸರಿಗೆ ಹಾಗೂ ಸಿಟಿಎಸ್ ನಂಬರಃ2671/2 ತಮ್ಮ ದೊಡ್ಡಪ್ಪನಾದ ಚನ್ನಮಲ್ಲಪ್ಪನ ಹೆಸರಿಗೆ ಹೋಗಿರುತ್ತದೆಂದರೆ ಸರಿ. ಸಿಟಿಎಸ್ ನಂಬರಃ2671/2 ಯಾವ ದಿಕ್ಕಿಗೆ ಬಂದಿರುತ್ತದೆಂದರೆ ಸಾಕ್ಷಿಯು ಸಿಟಿಎಸ್ ನಂಬರಃ2671/1 ರ ದಕ್ಷಿಣ ಭಾಗಕ್ಕೆ ಬಂದಿರುತ್ತದೆಂದು ನುಡಿಯುತ್ತಾರೆ. ಆದಕಾರಣ ಸಿಟಿಎಸ್ ನಂಬರಃ2671/1 ರ ದಕ್ಷಿಣ ದಿಕ್ಕಿಗೆ ಸಿಟಿಎಸ್ ನಂಬರಃ2671/2 ಇದೆ ಎಂದರೆ ಸರಿ. ಕರ್ನಾಟಕ ಬ್ಯಾಂಕನಲ್ಲಿಯೂ ಸಹ ತಾವು ಸಾಲವನ್ನು ಸರಿಯಾಗಿ

ಮರುಪಾವತಿ ಮಾಡಿಲ್ಲ ಎಂದರೆ ಸಾಲ ತೆಗೆದುಕೊಂಡವರು ಮಾಡಬೇಕೆಂದು ನುಡಿಯುತ್ತಾರೆ. ಸಾಲ ವಸೂಲಾತಿಗಾಗಿ ಬ್ಯಾಂಕನವರು ಸಿಟಿಎಸ್ ನಂಬರಃ2671/1 ರ ಮೇಲೆ ಕ್ರಮವನ್ನು ಜರುಗಿಸಲು ಪ್ರಕ್ರಿಯೇಯನ್ನು ಪ್ರಾರಂಬಿಸಿದರು ಎಂದರೆ ಸರಿ. ತಾವು ಅಸಲು ದಾವಾ ನಂಃ129/2007 ನ್ನು 1/3 ಹಿಸ್ಸೇ ಕೋರಿ ಹಾಕಿದ್ದೀರಿ ಎಂದರೆ ಸರಿ. ಸದರಿ ದಾವೆಯಲ್ಲಿ ತಾವು ತಮ್ಮ ಸಹೋದರ ಮತ್ತು ತಂದೆಗೂ ಸಹ 1/3 ಅಂಶ ಬರುತ್ತದೆಂದು ಪರೋಕ್ಷವಾಗಿ ತಿಳಿಸಿದ್ದೀರಿ ಎಂದರೆ ಸರಿ. ನಿಡಿ 8 ಕೇವಲ ಆದೇಶ ಪುಟ ಮಾತ್ರ ಇದ್ದು ಸಂಪೂರ್ಣ ತೀರ್ಪು ಅಲ್ಲ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಎನ್ನುತ್ತಾರೆ. ನಾನು ಸಂಪೂರ್ಣ ತೀರ್ಪನ ಪ್ರತಿಯನ್ನು ಕೊಟ್ಟಿರುವದಿಲ್ಲ. ಸದರಿ ದಾವೆಯು ಬ್ಯಾಂಕನ ಸಾಲವನ್ನು ಮುಚ್ಚಲು ಹಾಕಿರುತ್ತೀರಿ ಎಂದು ಹೇಳಿ ವಜಾ ಆಯಿತು ಎಂದರೆ ಸಾಕ್ಷಿಯು ಮೊದಲೇ ಭಾಗವಾಗಿತ್ತು ಎಂದು ಹೇಳಿ ವಜಾ ಆಗಿರುತ್ತದೆ ಎನ್ನುತ್ತಾರೆ. ತಾವು ಸದರಿ ತೀರ್ಪನ್ನು ಓದದೇ ತಪ್ಪು ಮಾಹಿತಿಯನ್ನು ನ್ಯಾಯಾಲಯಕ್ಕೆ ಒದಗಿಸುತ್ತಿದೀರಿ ಎಂದರೆ ಸರಿಯಲ್ಲ.

6. 3 ನೇ ಪ್ರತಿವಾದಿಯು ನನ್ನ ಅಣ್ಣನವರ ಮಾವ ಆಗಿರುತ್ತಾರೆ. ಇವರು ತಮ್ಮ ಆಸ್ತಿಯಲ್ಲಿ ಯಾವದೇ ತೀರ್ಮಾನ ತೆಗೆದುಕೊಳ್ಳಲು ಪ್ರಮುಖವಾದ ಪಾತ್ರವನ್ನು ವಹಿಸುತ್ತಿದ್ದರು ಎಂದರೆ ಸರಿಯಲ್ಲ. ತಾವು ಹಾಗೂ ತಮ್ಮ ತಂದೆಯವರು ಮಾತ್ರ ಸಿಟಿಎಸ್ ನಂಬರಃ2671/1 ನ್ನು ಖರೀದಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನಾವು ಮೂರು ಜನ ಕೊಟ್ಟಿರುತ್ತೇವೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ 3 ನ್ನು ತೋರಿಸಿ ಅದು ನೀವು ಹಾಗೂ ನಿಮ್ಮ ತಂದೆ 3 ನೇ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರ ಎಂದರೆ ಸರಿ. ಸದರಿ ಕಾಗದ ಪತ್ರದಲ್ಲಿ ತಮ್ಮ ಅಣ್ಣನ ಸಹಿ ಮತ್ತು ಹೆಸರು ಇರುವದಿಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಬ್ಯಾಂಕನ ಸಾಲವನ್ನು ಪಾವತಿಸಲು ಮಾರಾಟ ಮಾಡಲಾಗುತ್ತಿದೆ ಎಂದು ಉಲ್ಲೇಖಿಸಿಲ್ಲ ಎಂದರೆ ಸರಿ. 18 ಲಕ್ಷ ರೂ ಗಳಿಗೆ ಆಸ್ತಿಯನ್ನು ಮಾರಾಟ ಮಾಡಲಾಗಿರುತ್ತದೆ. 18 ಲಕ್ಷ ರೂ ಗಳು ತಮ್ಮ ಖಾತೆಗೆ ಬಂದಿದೆಯಾ ಎಂದರೆ ಸಾಕ್ಷಿಯು ನನ್ನ ಖಾತೆ ಇಲ್ಲ ನನ್ನ ತಂದೆಗೆ ಗೊತ್ತಿರುತ್ತದೆ ನನ್ನ ಖಾತೆಗೆ ಬಂದಿಲ್ಲ ಎನ್ನುತ್ತಾರೆ. 3 ನೇ ಪ್ರತಿವಾದಿಯು ಖರೀದಿಯನ್ನು ಕರ್ನಾಟಕ ಬ್ಯಾಂಕನ ಸಾಲ ತೀರಿಸಿದ ನಂತರ ಪುನಃ ತಮಗೆ ಖರೀದಿ ಮಾಡಿಕೊಡುವಾಗಿ ಹೇಳಿ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. 18 ಲಕ್ಷ ರೂ ಗಳು ತಮಗಾಗಲಿ ತಮ್ಮ ತಂದೆಗಾಗಲಿ ಬಂದಿರುವದಿಲ್ಲ ಎಂದರೆ ಸರಿ. ವಾದಿಯು ತನ್ನ 1/3 ನೇ ಹಿಸ್ಸೇಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಸ್ತಿಯಲ್ಲೇ ತಾವು ಸ್ವಾದೀನದಲ್ಲಿರುತ್ತೀರಿ ಎಂದರೆ ಸಾಕ್ಷಿಯು ದೇಖರೇಖೆ ಮಾಡುತ್ತಾ ಇರುತ್ತೇವೆ ಎನ್ನುತ್ತಾರೆ. ಸಿಟಿಎಸ್ ನಂಬರಃ2670 ಈಗ ನನ್ನ ದೊಡ್ಡಪ್ಪನ ಹೆಸರಿನಲ್ಲಿರುತ್ತದೆ. ನಿಡಿ 7 ಬ್ಯಾಂಕನ ಮಾರಾಟದ ನೋಟೀಸನ ಪ್ರತಿ ಎಂದರೆ ಸರಿ. ಬ್ಯಾಂಕನ ಸಾಲ ತೀರುವಳಿ ಆಗಿರುತ್ತದೆ. ಬ್ಯಾಂಕನ ಸಾಲ ತೀರುವಳಿ ಆಗದಿದ್ದರೂ

ತೀರುವಳಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಈ ದಾವೆಯಲ್ಲಿ  ಸಿಟಿಎಸ್ ನಂಬರಃ2672/ಬಿ ಬಗ್ಗೆ ಯಾವದೇ ಪ್ರತಿಮಾಗಣಿಯನ್ನು ಕೇಳಿರುವದಿಲ್ಲ ಎಂದರೆ ಸರಿ. ತಾವು ಇದರ ಬದಲಿ ಅಸಲು ದಾವಾ ನಂಃ299/2023 ಯನ್ನು ಹಾಕಿ ಅದರಲ್ಲಿ ಮಧ್ಯಂತರ ಆದೇಶವನ್ನು ಪಡೆದಿರುತ್ತೀರಿ ಎಂದರೆ ಸರಿ. ತಮ್ಮ ಸಹೋದರ ಅರುಣ ರವರು  ಕರ್ನಾಟಕ ಬ್ಯಾಂಕನಲ್ಲಿ  ಸಿಟಿಎಸ್ ನಂಬರಃ  2672/ಬಿ  ಯನ್ನು ಒತ್ತಿ ಇಟ್ಟಿದ್ದರು ಎಂದರೆ ಸರಿ. ನೀವು ಮತ್ತು ನಿಮ್ಮ ತಂದೆಯವರು  ಸಿಟಿಎಸ್ ನಂಬರಃ2671/1 ರಲ್ಲಿ ವಾದಿಗೆ ಇರುವ 1/3 ನೇ ಹಿಸ್ಸೇಯನ್ನು ಕೊಡುತ್ತಿಲ್ಲ ಎಂದರೆ ಸರಿಯಲ್ಲ. ತಮಗೆ ಸಂಪೂರ್ಣ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರದಿದ್ದರೂ 3 ನೇ ಪ್ರತಿವಾದಿ ಹೆಸರಿಗೆ ಬೇಕಾಯ್ದೇಶೀರ ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಕೇಸನ ಮೇಲೆ ಕೇಸನ್ನು ಹಾಕಿ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ 1/3 ನೇ ಅಂಶಕ್ಕೆ ಹಕ್ಕುದಾರರು ಇರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**